ಮನೀಷಾ ಕೊಯಿರಾಲ ಹಾಡುವ ಹಾಡು ನಿಮ್ಮ ಮಳೆಯ ನೆನಪನ್ನು ಮತ್ತೇರಿಸುವಂತೆ ಮಾಡದೇ ಬಿಡದು... ಅಲ್ಲಿನ ಸಾಹಿತ್ಯ ನೋಡಿ...

ಬಜ್ತಾ ಹೈ ಜಲ್‌ತರಂಗ್ ಟಿನ್ ಕಿ ಛತ್ ಪೆ ಜಬ್/ ಮೋತಿಯೋ ಜೈಸಾ ಜಲ್ ಬರಸೆ (ಚಾವಣಿಯ ಮೇಲೆ ಬೀಳುವ ಈ ಮಳೆಹನಿಗಳು ಜಲತರಂಗದಂತೆ.... ಮುತ್ತಿನ ಹನಿಗಳಂತೆ), ಬೂಂದೋಂಕಿ ಯೆ ಲಡಿ ಲಾಯಿ ಹೈ ವೋ ಘಡಿ/ ಜಿಸ್ಕೆ ಲಿಯೇ ಹಮ್ ತರ್‌ಸೇ... ಒಂದಕ್ಕೊಂದು ಪೈಪೋಟಿ ನೀಡುವಂತೆ ಸುರಿವ ಈ ಮಳೆ ಹನಿಗಳು ನಾವು ಯಾವ ಗಳಿಗೆಗೆ ಕಾದಿದ್ದೆವೋ ಆ ಗಳಿಗೆಯನ್ನು ಹೊತ್ತು ತಂದಿದೆ, ಮತ್ತೆ ಮುಂದೆ...

ಮೋಡಗಳ ಚಾದರವನ್ನೇ ಹೊದ್ದ ಪರ್ವತಗಳು, ದಶ ದಿಕ್ಕುಗಳೂ ನಿದ್ದೆಯಲ್ಲಿ ಮೈಮರೆತಿರುವಾಗ, ಮಳೆಯ ಋತುವಿನಲ್ಲಿ ನೀನು ನಾನು, ನಾನು ನೀನು ಹಾಗೇ ಕೈ ಕೈ ಹಿಡಿದು ಜತೆಯಾಗಿ ನಡೆಯೋಣ... ಅಂತ ಅವನು ಹೇಳಿದರೆ, ಕನಸಿನೂರಿನಲ್ಲಿ ಮಳೆಯಿಂದ ತೊಯ್ದಿರುವ ಈ ಚಾವಣಿ ಅಡಿಯಲ್ಲಿ ಎರಡು ಆತ್ಮಗಳು ಕಳೆದುಹೋಗಿವೆ ಅನ್ನುತ್ತಾಳಾಕೆ. ಗಾಜಿನ ಮನೆಯಲ್ಲಿ ಅವರಿಬ್ಬರೇ ಇದ್ದರೂ, ಅವಳು ಸೀರೆಯಲ್ಲಿ ತೊಯ್ದು ತೊಪ್ಪೆಯಾಗಿದ್ದರೂ ಅವನಿಗೆ ಅವಳ ಕಿವಿಯೋಲೆ ತಲುಪಿಸುವ ಆಸೆ, ತಾನೇ ಸನಿಹಕ್ಕೆ ಬಂದು ಕಿವಿಗೆ ತೊಡಿಸುವ ಹುಮ್ಮಸ್ಸು! ಅಪ್ಪಿತಪ್ಪಿಯೂ ಪ್ರೇಮಿಗಳು ದೈಹಿಕ ಕಾಮನೆಯ ಪ್ರೀತಿಯ ಮಾತನಾಡುವುದಿಲ್ಲ. ಮಳೆಯ ನಡುವೆ ಎರಡು ಆತ್ಮಗಳ ಸಮ್ಮಿಲನವಿದು ಅನ್ನುತ್ತಾರೆ.

ಸಾವನ್ ಬರಸೆ ತರಸೇ ದಿಲ್, ಕ್ಯೂಂ ನಾ ನಿಕಲೇ ಘರ್ ಸೇ ದಿಲ್... ಬರಖಾ ಮೇ ಭೀ ದಿಲ್ ಪ್ಯಾಸಾ ಹೈ... ಅಂದರೆ ಇದು ಪ್ರೇಮವಲ್ಲದೆ ಮತ್ತೇನು?

ಧೋ ಎಂದು ಸುರಿವ ಮಳೆಯಲ್ಲಿ ಬೆಚ್ಚಗೆ ಹೊದ್ದು ಮಲಗಬೇಕೆಂದು ಮನಸು ಹೇಳುತ್ತಿದ್ದರೂ ಹೃದಯದ ಮಾತೇ ಬೇರೆ. ಸುರಿವ ಮಳೆಯಲ್ಲೂ ಬೆಚ್ಚಗೆ ನೆನಪಾಗುವ ಅವನು/ಅವಳನ್ನು ನೋಡುವ ಆಸೆ ಹುಚ್ಚುಖೋಡಿ ಮನಸಿನದು. ಪ್ರೇಮದ ಮತ್ತು ಮಳೆಯ ಗಮ್ಮತ್ತು ಒಂದಾದರೆ ಪ್ರೇಮಿಗಳನ್ನು ಆ ಮಳೆರಾಯನಿಗೂ ತಡೆಯಲು ಸಾಧ್ಯವಿಲ್ಲವೇನೋ? ಹಂಗಾಗೆ ಸುರಿವ ಮಳೆಯಲ್ಲೂ ಅವಳನ್ನು ನೋಡುವ ತುಡಿತದಲ್ಲಿ ಮನೆಯಿಂದ ಅವನು ಹೊರಡುವನು.

ದೇಖೋ ಕೈಸೆ ಬೇಕರಾರ್ ಹೈ/ಭರೇ ಬಜಾರ್



ಮೇ/ ಯಾರ್ ಏಕ್ ಯಾರ್ ಕೆ ಇಂತಜಾರ್ ಮೇ (ಜನರಿಂದ ತುಂಬಿ ತುಳುಕುವ ಸಂತೆಯಲ್ಲೂ ಅವನು/ಅವಳು ಪರಸ್ಪರರನ್ನು ಭೇಟಿಯಾಗಲು ಕಾಯುವರು)...


ಮಳೆ ಬಂದ ಊರಿನಲ್ಲಿ ಪ್ರೇಮಿಗಳದ್ದು ಈ ಕಥೆಯಾದರೆ, ಮಳೆಬರದೇ ಕಾಯಿಸುವ ಬಯಲುಸೀಮೆಯಲ್ಲಿನ ಪ್ರೇಮಿಗಳದ್ದು ಮತ್ತೊಂದು ಕಥೆ. ಮಳೆ ಮೋಡಗಳು ದಟ್ಟೈಸಿ ಮಳೆ ಹನಿ ಇನ್ನೇನು ಬೀಳದೇ ಕಾಯಿಸುವ ಗಳಿಗೆಯಲ್ಲಿ ಮಳೆ ಬರುವ ಹಾಗಿದೆ... ಮನವೀಗ ಹಾಡಿದೆ... ಅನ್ನುವುದು ಅವಳ ದನಿಯಾದರೆ, ಅಂಥ ಮಳೆ ಮೋಡಗಳ ನಡುವೆಯೂ ದೂರದಲ್ಲಿರುವ ಅವನನ್ನು ನೆನೆದು, ಗೆಳೆಯ ನೀನು ಬಳಿ ಅನುಕ್ಷಣವು ಬೇಕಾಗಿದೆ, ಅಷ್ಟೇ ಅಲ್ಲ, ದಿನಕೆ ನೂರು ಬಾರಿ ನೀನು ಪ್ರೀತಿ ಹೇಳಬೇಕಿದೆ... ಅನ್ನೋದನ್ನು ಕೂಡ ಹೇಳುವುದನ್ನು ಮರೆಯದ ಜಾಣೆಯವಳು!.

ಇನಿಯ ನಮ್ಮ ಒಲವು ಮೆರವಣಿಗೆ ಹೊರಟಾಗಿದೆ/ ಮರೆತ ಹಾಗೆ ಚೂರು ನಟಿಸಿ ನಿನ್ನ ಕಾಡಬೇಕಿದೆ! ಅನ್ನುವುದೂ ಅವನನ್ನು ಕಾಡಿಸುವ ಪರಿಯಲ್ಲದೇ ಮತ್ತೇನು?

ನಲ್ಲೆಯೇ ಇಷ್ಟು ಕಾಡಿಸುವಾಗ ನಲ್ಲ ಸುಮ್ಮನಿರುವನೇನು? ಅವಳಿಗಿಂತ ಒಂದು ಹೆಜ್ಜೆ ಮುಂದೆ ಎಂಬಂತೆ, 'ಬಾ ಮಳೆಯೇ ಬಾ... ಅಷ್ಟು ಬಿರುಸಾಗಿ ಬಾರದಿರು ನನ್ನ ನಲ್ಲೆ ಬರಲಾಗದಂತೆ... ಅವಳಿಲ್ಲಿ ಬಂದೊಡನೆ ಮತ್ತೆ ಬಿರುಸಾಗಿ ಸುರಿ ಹಿಂತಿರುಗಿ ಹೋಗದಂತೆ ಅವಳು ಹಿಂತಿರುಗಿ ಹೋಗದಂತೆ' ಅನ್ನೋದು ಮಳೆರಾಯನ ಬಳಿ ಅವನ ಪ್ರಾರ್ಥನೆ! ಭೂಮಿಯನ್ನು ಕಾಣಲು ಬರುವ ಮಳೆರಾಯನಂತೆ ಮುತ್ತಿಕ್ಕಿ, ಬಿಗಿದಪ್ಪುವ ಆಸೆ ಅವನದು ಅನ್ನೋದು ಆ ಮೇಘರಾಜನಿಗೂ ಗೊತ್ತು!

'ನೀನು ಮುಗಿಲು ನಾನು ನೆಲ ನಿನ್ನ ಒಲವೇ ನನ್ನ ಬಲ' ಅನ್ನೋದನ್ನ ಸಾಕ್ಷೀಕರಿಸಲೆಂಬಂತೆ ಸುರಿವ ಈ ಮಳೆ ಇಳೆಯೊಂದಿಗೆ ಸಮ್ಮಿಲನವಾಗಲು ಹೊರಟಾಗ ಹುಲುಮಾನವರಾದ ನಮ್ಮ ಪಾಡೇನು? 'ತುಂತುರು ಅಲ್ಲಿ ನೀರ ಹಾಡು, ಕಂಪನ ಇಲ್ಲಿ ಪ್ರೀತಿಹಾಡು, ಹಗಲಿರಲಿ ಇರುಳಿರಲಿ ನೀನಿರದೇ ಹೇಗಿರಲಿ?' ಅನ್ನುವ ಸಣ್ಣ ಮಳೆಯಂಥ ಪ್ರಶ್ನೆ ಮುಂದಿಡುತ್ತಲೇ ಸಖನಿಗೆ ತನ್ನ ಮನದಿಂಗಿತವನ್ನು ಹೇಳುವಳಾಕೆ. ಅದರ ಜತೆಗೆ 'ಸ್ವಾತಿಮುತ್ತಿನ ಮಳೆಹನಿಯೇ ಮೆಲ್ಲ ಮೆಲ್ಲನೆ ಧರೆಗಿಳಿಯೇ..., 'ಸುರಿವ ಮಳೆನೀರೆಲ್ಲ ಪನ್ನೀರ ಹನಿಹನಿಗಳಂತೆ...' ಅನ್ನೋದು ಕೂಡಾ ಅವಳ ಮೆಲ್ಲುಸಿರಿನ ಮೂಲಕ ಅವನಿಗೆ ತಲುಪಿಸುವ ಇಂಗಿತ.

ಇಷ್ಟೆಲ್ಲದರ ನಡುವೆ ಶುಭಾ ಮುದಗಲ್ ಅವರ 'ಅಬ್ ಕೆ ಸಾವನ್ ಐಸೇ ಬರಸೇ' ನೆನಪಿಸಿಕೊಳ್ಳದಿದ್ದರೆ ಈ ಮಳೆ ಹಾಡೇ ಅಪೂರ್ಣ. ಬರೆದಷ್ಟೂ ಮುಗಿಯದ ಮಳೆಹಾಡುಗಳ ಪಯಣವಿದು. ಬಿಟ್ಟು ಬಿಟ್ಟು ಬರುವ ಮಳೆಯಂತೆ!

ಓಂ ಶ್ರೀ ರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ

ಪಂ. ಸುರೇಶ್ ಭಟ್ 9900305071

ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ.



ನಿಮ್ಮ ಕೌಟುಂಬಿಕ ಸಮಸ್ಯೆಗಳಾದ: ವಿದ್ಯೆ, ಉದ್ಯೋಗ, ಮದುವೆ ಕಾರ್ಯದಲ್ಲಿ ವಿಳಂಬ, ಡೈವರ್ಸ್ ತೊಂದರೆ, ಗಂಡ-ಹೆಂಡತಿ ಕಿರಿಕಿರಿ, ಸಂತಾನ ಸಮಸ್ಯೆ, ಸ್ತ್ರೀ ವಶೀಕರಣ, ಪುರುಷ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಪ್ರೀತಿಯಲ್ಲಿ ನಂಬಿ ಮೋಸ, ಶತ್ರುನಾಶ, ವಿದೇಶ ಪ್ರಯಾಣ, ರಾಜಕೀಯ, ಸಿನಿಮಾರಂಗ, ವ್ಯಾಪಾರದಲ್ಲಿ ತೊಂದರೆ, ಮನಶಾಂತಿ ಕೊರತೆ, ಭೂಮಿ ವಿಚಾರ, ಕೋರ್ಟ್‌ಕೇಸ್, ಇನ್ನೂ ಯಾವುದೇ ಕಠಿಣ, ಗುಪ್ತ ಸಮಸ್ಯೆಗಳಿದ್ದರು

ಕೇರಳ ಹಾಗೂ ಕೊಳ್ಳೇಗಾಲದ ಇಷ್ಟಕಾಮೇಶ್ವರಿ ದೇವಿ ಪೂಜಾಶಕ್ತಿಯಿಂದ 2 ದಿನಗಳಲ್ಲಿ ಪರಿಹಾರ

ಹಲವಾರು ಜ್ಯೋತಿಷ್ಯರಲ್ಲಿ ಕೇಳಿ ಹಣ, ನೆಮ್ಮದಿ, ವಿಶ್ವಾಸ ಕಳೆದುಕೊಂಡಿದ್ದರೆ ಚಿಂತಿಸಬೇಡಿ!
ಇಂದೇ ಕರೆಮಾಡಿ,

ನಿಮ್ಮ ಒಂದು ಕರೆ
ನಿಮ್ಮ ಜೀವನವನ್ನೇ ಬದಲಾಯಿಸುತ್ತದೆ.